"2006ರ ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ.ಪಿ. ಪ್ರಕಾಶ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, "2006ರ ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ–3

ಅಧ್ಯಕ್ಷರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಿಧೇಯಕವನ್ನು ತಾವು ತೆಗೆದುಕೊಳ್ಳೋಣವೆಂದು ಹೇಳಿದರೆ ತೆಗೆದುಕೊಳ್ಳೋಣ.

ಶ್ರೀ ಎಸ್.ಎಸ್. ಪಾಟೀಲ್: ದಯವಿಟ್ಟು ಅದರ ಬಗ್ಗೆ ಸ್ವಲ್ಪ ಹೇಳಿ, ಕೇಳಿ ಎಲ್ಲರೂ ತಿಳಿದುಕೊಳ್ಳಲಿ. ಎಲ್ಲರಿಗೂ ಅನುಭವವಾಗುತ್ತದೆ.

6. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:– ನಿರ್ವಹಣಾ ಮುಂಗಡ ಪತ್ರ ಒದಗಿಸುವ ಬಗ್ಗೆ (Performance Budget)

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಅಧ್ಯಕ್ಷರೆ, ಮಾನ್ಯ ಎಸ್.ಎಸ್. ಪಾಟೀಲ್‌ರವರು ಪರ್‌ಫಾರ್ಮೆನ್ಸ್ ಬಜೆಟ್‌ನ ಕಾಪಿಗಳನ್ನು ಕೆಲವು ಇಲಾಖೆಗಳವರು ಕೊಡಲಿಲ್ಲವೆಂದು ಹೇಳಿದ್ದಾರೆ. ಅದು ನಿಜ ಕೂಡ ಇದೆ. ಈ ತರಹ ಆಗದಂತೆ ನಾನು ಇಲಾಖೆಯವರ ಜೊತೆ ಪ್ರಸ್ತಾಪ ಮಾಡಿ ಎಲ್ಲರಿಗೂ ತಿಳಿಸಿದ್ದಾಗ್ಯೂ ಕೂಡ ಕೆಲವು ಇಲಾಖೆಗಳವರು ಕೊಡಲಿಲ್ಲ. ಅದು ಅಕ್ಷಮ್ಯ ಅಪರಾಧ. ಯಾವುದೋ ಕಾರಣಕ್ಕಾಗಿ ಇಲ್ಲಿ ನಾವು ನಮ್ಮ ಆಯವ್ಯಯವನ್ನು ಒಪ್ಪಿಕೊಂಡಿರಬಹುದು. ಆದರೆ ಒಂದು ಅರ್ಥಪೂರ್ಣವಾದಂಥ ಚರ್ಚೆ ಆಗಬೇಕಾಗಿದ್ದರೆ, ಅವುಗಳನ್ನು ಮಂಡಿಸಬೇಕಾಗಿತ್ತು ಅದರ ತಪ್ಪನ್ನು ಸರ್ಕಾರ

ಸಂಪೂರ್ಣವಾಗಿ ವಹಿಸಿಕೊಳ್ಳುತ್ತದೆ. ಇನ್ನು ಮುಂದೆ ಈ ರೀತಿ ಆಗದಂತೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ನ.ಲ. ನರೇಂದ್ರಬಾಬು ಪರ್‌ಫಾರ್ಮೆನ್ಸ್ ಬಜೆಟ್ ಕಾಪಿ ಯಾವಾಗ ಕಳುಹಿಸಿ ಕೊಡುತ್ತೀರಿ? ಅಕೆಡಮಿಕ್ ಇಂಟರೆಸ್ಟ್‌ನಿಂದ ತಿಳಿದುಕೊಳ್ಳುವುದ ಕ್ಕೋಸ್ಕರ ಅದರ ಕಾಪಿಗಳನ್ನು ಯಾವಾಗ ಕಳುಹಿಸಿ ಕೊಡುತ್ತೀರಿ?

ಶ್ರೀ ಎಂ.ಪಿ. ಪ್ರಕಾಶ್: ಕಳುಹಿಸಿ ಕೊಡುತ್ತೇವೆ. ಕೆಲವು ಇಲಾಖೆಗಳ ಮಾಹಿತಿ ಬಂದಿದೆ ಉಳಿದ ಇಲಾಖೆಗಳ ಮಾಹಿತಿಗಳನ್ನು ತಮಗೆ ಕಳುಹಿಸಿ ಕೊಡುತ್ತೇವೆ.

7. ವಿಧೇಯಕರನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಎರಡನೇ ತಿದ್ದುಪಡಿ) ವಿಧೇಯಕ, 2005

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, "2005ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಂಡಿಸಲ್ಪಟ್ಟಿರತಕ್ಕಂತಹ ಈ ವಿಧೇಯಕದಲ್ಲಿ ಹೈಟೆಕ್ ನಗರದ ನಿರ್ಮಾಣಕ್ಕಾಗಿ ಸರ್ಕಾರದ ಆದೇಶ 23.2.2004ರ ಅಡಿಯಲ್ಲಿ ಏಕ ಕಾಲಿಕ ಕ್ರಮವಾಗಿ ಮಂಜೂರು ಮಾಡಲು ಈ ಪ್ರಸ್ತಾವ ತಂದಿದ್ದೇವೆ. ಮಂಜೂರು ಮಾಡತಕ್ಕಂತಹ ವಿಚಾರಕ್ಕೆ ಕೆಐಡಿಬಿಯವರು ಇದನ್ನು ಮಾಡಬೇಕಾಗಿತ್ತು. ಆದರೆ ಹೈಟೆಕ್ ನಗರವನ್ನು ಮಾಡುವಾಗ ಸರ್ಜಾಪುರ ಹೊಸೂರು ರಸ್ತೆಯನ್ನು ಬಹಳ ದೊಡ್ಡ ಪ್ರಮಾಣದ ಹಣವನ್ನು ಖರ್ಚು ಮಾಡಿ ರಸ್ತೆ ಮಾಡತಕ್ಕಂಥದ್ದು ಅಲ್ಲಿ ಪೂರಕವಾದ ಅನುಕೂಲಗಳನ್ನು ಕಲ್ಪಿಸಿಕೊಡಬೇಕೆಂದು ಹೇಳಿ ಆಗಿದ್ದರಿಂದ ಈ ಹೈಟೆಕ್ ನಗರದ ವಿನ್ಯಾಸ ರೂಪಿಸುವುದು, ಸರ್ಜಾಪುರ ರಸ್ತೆ ಮತ್ತು ಹೊಸೂರು ರಸ್ತೆಗಳ ನಡುವೆ ರಸ್ತೆ